ಕುವೆಂಪು ವಿಶ್ವವಿದ್ಯಾಲಯ

ಹಣಕಾಸು ವಿಭಾಗ, ಜ್ಞಾನಸಹ್ಯಾದ್ರಿ, ಶತಮಾನೋತ್ಸವ ಭವನ, ಶಂಕರಘಟ್ಟ – 577 451

ಸಂಖ್ಯೆ: ಕುವಿ: ಹವಿ:ಆಸ: 1250 :2024-25 ದಿನಾಂಕ:28-10-2024

ಮಾನ್ಯರೆ,

ವಿಷಯ: 2024-25ನೇ ಹಣಕಾಸು ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಕಳುಹಿಸುತ್ತಿರುವ ಕುರಿತು.

* * *

ದಿನಾಂಕ:16-10-2024ರಂದು ನಡೆದ ಕುವೆಂಪು ವಿಶ್ವವಿದ್ಯಾನಿಲಯದ 2024-25ನೇ ಹಣಕಾಸು ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಈ ಮೂಲಕ ತಮ್ಮ ಅವಗಾಹನೆಗಾಗಿ ಕಳುಹಿಸಿಕೊಡಲಾಗಿದೆ.

ಸದರಿ ನಡಾವಳಿಗಳನ್ನು ಕಳುಹಿಸಿದ 07 ದಿನಗಳೊಳಗೆ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ವಂದನೆಗಳೊಂದಿಗೆ,

ಆದೇಶಾನುಸಾರ,

ಸಹಿ/-

**ಹಣಕಾಸು ಅಧಿಕಾರಿ ಹಾಗೂ ಕಾರ್ಯದರ್ಶಿ.**

**ಇವರಿಗೆ :**

1. ಮಾನ್ಯ ಕುಲಪತಿಗಳು ಹಾಗೂ ಅಧ್ಯಕ್ಷರು, ಕುವೆಂಪು ವಿಶ್ವವಿದ್ಯಾಲಯ,ಜ್ಞಾನಸಹ್ಯಾದ್ರಿ, ಶಂಕರಘಟ್ಟ- 577 451. ಇವರ ಮಾಹಿತಿ ಮತ್ತು ಅವಗಾಹನೆಗಾಗಿ.
2. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, 2ನೇ ಮಹಡಿ, ಬೆಂಗಳೂರು – 560001.
3. ಸರ್ಕಾರದ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, 6ನೇ ಮಹಡಿ, ಬೆಂಗಳೂರು – 560001.
4. ನಿರ್ದೇಶಕರು, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, 7ನೇ ಮಹಡಿ, ಬೆಂಗಳೂರು – 560001.
5. ಶ್ರೀ ಶಶಿಧರ್. ಬಿ.ಎನ್.,#21, 5ನೇ ಕ್ರಾಸ್, 1ನೇ ಮೇನ್, ರೆವಿನ್ಯೂ ಲೇಔಟ್, ಅನ್ನಪೂರ್ಣೇಶ್ವರಿ ನಗರ, ನಾಗರಭಾವಿ, 2ನೇ ಸ್ಟೇಜ್, ಬೆಂಗಳೂರು-560072.
6. ಶ್ರೀ. ಡಿ. ಎಸ್. ಅರುಣ್, ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಶಾಸಕರು, "ಸತ್ಯಶಂಕರ ನಿಲಯ" 100 ಅಡಿ ರಸ್ತೆ, ವಿನಾಯಕನಗರ, ಶಿವಮೊಗ್ಗ-577201.
7. ಮಾನ್ಯ ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
8. ಮಾನ್ಯ ಕುಲಸಚಿವರು (ಮೌಲ್ಯಮಾಪನ), ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.

**ಪ್ರತಿಗಳು:**

1) ಆಪ್ತ ಸಹಾಯಕರು:- ಮಾನ್ಯ ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌಲ್ಯಮಾಪನ) ಹಣಕಾಸು ಅಧಿಕಾರಿಗಳು, ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ- 577451.

ಹಣಕಾಸು ಅಧಿಕಾರಿ 28/10/2024
ಹಣಕಾಸು ಅಧಿಕಾರಿಗಳು
ಕುವೆಂಪು ವಿಶ್ವವಿದ್ಯಾಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577 451

# ಕುವೆಂಪು ವಿಶ್ವವಿದ್ಯಾಲಯ

## 2024–25ನೇ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳು

## ಸಭಾ ದಿನಾಂಕ:16–10–2024

ಹಣಕಾಸು ವಿಭಾಗ

ಜ್ಞಾನಸಹ್ಯಾದ್ರಿ, ಶತಮಾನೋತ್ಸವ ಭವನ, ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ

# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:16-10-2024ರಂದು ಬುಧವಾರ ಅಪರಾಹ್ನ 11.00 ಘಂಟೆಗೆ ಬೆಂಗಳೂರಿನ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸಭಾಂಗಣದಲ್ಲಿ ನಡೆದ 2024-25ನೇ ಆರ್ಥಿಕ ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳು.

| ಹಾಜರಾದ ಸದಸ್ಯರು: | ಪದನಾಮ |
|---|---|
| 1. ಪ್ರೊ. ಶರತ್ ಅನಂತಮೂರ್ತಿ<br>ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. ಶ್ರೀಮತಿ ಉಮಾ. ಕೆ<br>ಜಂಟಿ ಕಾರ್ಯದರ್ಶಿಗಳು<br>ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ,<br>ವಿಧಾನಸೌಧ, ಬೆಂಗಳೂರು | ಸದಸ್ಯರು |
| 3. ಶ್ರೀ ಎನ್. ಕುಮಾರ್<br>ಸರ್ಕಾರದ ಉಪಕಾರ್ಯದರ್ಶಿಗಳು<br>(ತಾಂತ್ರಿಕ ಶಿಕ್ಷಣ ಮತ್ತು ಯೋಜನೆ)<br>ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 4. ಶ್ರೀ ಬಸವರಾಜ. ಎಸ್.<br>ನಿರ್ದೇಶಕರು<br>ಯೋಜನಾ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 5. ಶ್ರೀ ಶಶಿಧರ್. ಟಿ. ಎನ್<br>ಸಿಂಡಿಕೇಟ್ ಸದಸ್ಯರು | ಸದಸ್ಯರು |
| 6. ಶ್ರೀ. ಡಿ. ಎಸ್. ಅರುಣ್.<br>ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು | ಸದಸ್ಯರು |
| 7. ಶ್ರೀ ಎ. ಎಲ್. ಮಂಜುನಾಥ್. ಕೆ. ಎ. ಎಸ್. ಸೂಪರ್ ಟೈಮ್ ಸ್ಕೇಲ್<br>ಕುಲಸಚಿವರು (ಆಡಳಿತ) | ಸದಸ್ಯರು |
| 8. ಪ್ರೊ. ಹೆಚ್. ಎನ್. ರಮೇಶ<br>ಹಣಕಾಸು ಅಧಿಕಾರಿ | ಸದಸ್ಯ ಕಾರ್ಯದರ್ಶಿಗಳು |

ಗೈರುಹಾಜರಾದ ಸದಸ್ಯರು

| | |
|---|---|
| 1) ಪ್ರೊ. ಗೋಪಿನಾಥ್. ಎಸ್. ಎಂ.<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |

ಪ್ರಸ್ತಾವನೆ:

ಪ್ರಾರಂಭದಲ್ಲಿ, ಹಣಕಾಸು ಅಧಿಕಾರಿಗಳು 2024-25ನೇ ಸಾಲಿನ ಆರ್ಥಿಕ ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಮತ್ತು ಇತರೆ ಸದಸ್ಯರನ್ನು ವಿಶ್ವವಿದ್ಯಾಲಯದ ಪರವಾಗಿ ಸ್ವಾಗತಿಸಿದರು.

ಪ್ರಥಮವಾಗಿ ಹಣಕಾಸು ಸಮಿತಿ ಸಭೆಗೆ ಆಗಮಿಸಿದ ಮಾನ್ಯ ಕುಲಪತಿಗಳನ್ನು ಸಭೆಗೆ ಪರಿಚಯಿಸಿದರು ಹಾಗೂ ನೂತನ ಸದಸ್ಯರಾಗಿ ಶ್ರೀ. ಬಸವರಾಜ. ನಿರ್ದೇಶಕರು ಯೋಜನೆ ಇಲಾಖೆ, ಬೆಂಗಳೂರು ಹಾಗೂ ನೂತನ ಕುಲಸಚಿವರಾಗಿ ಆಗಮಿಸಿದ ಶ್ರೀ. ಎ.ಎಲ್. ಮಂಜುನಾಥ. ಕೆ. ಎ. ಎಸ್. ಸೂಪರ್ ಟೈಮ್ ಸ್ಕೇಲ್., ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ. ಡಿ. ಎಸ್. ಅರುಣ್. ವಿಧಾನ ಪರಿಷತ್ತಿನ ಸದಸ್ಯರು ಇವರನ್ನು ಸಭೆಗೆ ಪರಿಚಯಿಸಿ ಹೃತ್ಪೂರ್ವಕವಾಗಿ ಸ್ವಾಗತಿಸಿದರು. ವಿಶ್ವವಿದ್ಯಾಲಯದ ಕಿರು ಪರಿಚಯ ಮತ್ತು ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಕಾರ್ಯಚಟುವಟಿಕೆಗಳ ಸಂಕ್ಷಿಪ್ತ ವರದಿಯನ್ನು ಸಭೆಯ ಅವಗಾಹನೆಗೆ ತಂದು ನಂತರ ಕಾರ್ಯಸೂಚಿಯನ್ನು ಸಭೆಯ ಅಧ್ಯಕ್ಷರ ಅನುಮತಿಯನ್ನು ಪಡೆದು ಸಭಾ ಕಾರ್ಯಸೂಚಿಯಂತೆ ಕಾರ್ಯಕಲಾಪಗಳನ್ನು ಕೈಗೆತ್ತಿಕೊಳ್ಳಲಾಯಿತು.

| | |
|---|---|
| 2024-ಹಸ:1:01 | **ದಿನಾಂಕ:26-02-2024ರಂದು ನಡೆದ 2023-24ನೇ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ದೃಢೀಕರಣ.** |
| ನಿರ್ಣಯ: | ದಿನಾಂಕ:26-02-2024ರಂದು ನಡೆದ 2023-24ನೇ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಪರಿಶೀಲಿಸಿ ದೃಢೀಕರಿಸಿತು. |
| 2024-ಹಸ:1:02 | **ದಿನಾಂಕ:26-02-2024ರಂದು ನಡೆದ 2023-24ನೇ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.** |
| ನಿರ್ಣಯ: | ದಿನಾಂಕ:26-02-2024ರಂದು ನಡೆದ 2023-24ನೇ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಅನುಮೋದಿಸಿತು. |
| 2024-ಹಸ:1:03 | **2023-24ನೇ ಆರ್ಥಿಕ ವರ್ಷದ ಸ್ವೀಕೃತಿ ಮತ್ತು ವೆಚ್ಚಗಳ ಅವಲೋಕನ ಹಾಗೂ ಅನುಮೋದನೆ ಕುರಿತು.** |
| ಚರ್ಚೆ | ಅತಿಥಿ ಉಪನ್ಯಾಸಕರಿಗೆ 2023-24ನೇ ಸಾಲಿನಲ್ಲಿ ರೂ. 1095.66ಲಕ್ಷಗಳನ್ನು ಪಾವತಿಸಲಾಗಿದೆ. ಕಾರ್ಯಭಾರದ ಅನುಸಾರ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲು ಜಂಟಿ ಕಾರ್ಯದರ್ಶಿಗಳು ಸಲಹೆ ನೀಡಿದರು. ಹಣಕಾಸು ಅಧಿಕಾರಿಗಳು ಮಾತನಾಡಿ ಇತ್ತೀಚಿನ ವರ್ಷಗಳಲ್ಲಿ ಹಲವು ಹೊಸ ಕೋರ್ಸುಗಳನ್ನು ಬೇಡಿಕೆಗೆನುಸಾರವಾಗಿ ಪ್ರಾರಂಭಿಸಿದ್ದು, ಖಾಲಿಯಿರುವ ಹುದ್ದೆಗಳಿಗಿಂತ ಅಧಿಕ ಸಂಖ್ಯೆಯಲ್ಲಿರುವ ಅತಿಥಿ ಉಪನ್ಯಾಸಕರಿಗೆ ವೇತನ ಪಾವತಿಸಬೇಕಾಗಿರುತ್ತದೆ. ಎಂದು ಸಭೆಗೆ ತಿಳಿಸಿದರು.<br><br>ಮಾನ್ಯ ಕುಲಸಚಿವರು ಮಾತನಾಡಿ, ಈಗಾಗಲೇ ಬೋಧನಾ ಅವಧಿಗೆ ಅನುಸಾರವಾಗಿ ನಿಯಮಾನುಸಾರ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಆದ್ಯಾಗೂ 2024-25ನೇ ಸಾಲಿಗೆ ನಿಕಾಯದ ಡೀನರುಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ, ಸಮಿತಿಯು ಸಲ್ಲಿಸಿದ ಶೈಕ್ಷಣಿಕ ಬೋಧನಾ ಕಾರ್ಯಭಾರದ ಅನುಸಾರವಾಗಿ ಅಗತ್ಯಕ್ಕೆ ತಕ್ಕಂತೆ ನೇಮಕ ಮಾಡಿಕೊಳ್ಳಲಾಗಿದೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು. |

| | |
|---|---|
| | ಶ್ರೀ ಡಿ.ಎಸ್. ಅರುಣ್, ಮಾನ್ಯ ವಿಧಾನಪರಿಷತ್ತಿನ ಸದಸ್ಯರು ಮಾತನಾಡುತ್ತಾ, ಖಾಯಂ ಬೋಧಕ ಹುದ್ದೆಗಳನ್ನು ನೇಮಕ ಮಾಡಿಕೊಂಡಲ್ಲಿ ಅತಿಥಿ ಉಪನ್ಯಾಸಕರ ವೆಚ್ಚಗಳನ್ನು ಕಡಿಮೆಗೊಳಿಸಬಹುದಾಗಿದೆ ಎಂದು ಸಲಹೆ ನೀಡಿದರು. ಜಂಟಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಇವರು ಖಾಲಿ ಇರುವ ಹುದ್ದೆಗಳಿಗೆ ಸಮುಚಿತ ಮಾರ್ಗದ ಮೂಲಕ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಲು ಸಲಹೆ ನೀಡಿದರು. ಮಾನ್ಯ ಕುಲಸಚಿವರು ಮಾತನಾಡಿ ಈಗಾಗಲೇ ಸರ್ಕಾರದಿಂದ ಅನುಮೋದನೆಯಾಗಿರುವ 24 ಹುದ್ದೆಗಳನ್ನು ನೇಮಕಮಾಡಿಕೊಳ್ಳಲು ಕ್ರಮವಹಿಸಲಾಗುವುದು ಎಂದು ಸಭೆಯ ಗಮನಕ್ಕೆ ತಂದರು. ಬಾಕಿಯಿರುವ ಖಾಯಂ ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲು ಪ್ರಸ್ತಾವನೆಯನ್ನು ಸಲ್ಲಿಸಲಾಗುವುದೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.<br><br>ಶ್ರೀ. ಡಿ.ಎಸ್. ಅರುಣ್, ಮಾನ್ಯ ವಿಧಾನಪರಿಷತ್ತಿನ ಸದಸ್ಯರು ಇವರು ಮಾತನಾಡಿ, ವಿದ್ಯಾರ್ಥಿಗಳ ಸಂಬಂಧಿಸಿ ಕಾರ್ಯಚಟುವಟಿಕೆಗಳ ಪರಿಶೀಲಿಸಲಾಗಿ ಅನೇಕ ಶೀರ್ಷಿಕೆಗಳಲ್ಲಿ ವೆಚ್ಚವಾಗದೇ ಇರುವುದಕ್ಕೆ ಅಕ್ಷೇಪಣೆ ವ್ಯಕ್ತಪಡಿಸಿದರು. ವಿದ್ಯಾರ್ಥಿಗಳ ಕ್ರೀಡೆ ಮತ್ತು ಪಠ್ಯೇತರ ಚಟುವಟಿಕೆ ವಿಚಾರಸಂಕಿರಣ, ರೋವರ್ಸ್ ರೇಂಜರ್ಸ್ ಮತ್ತು ವಿಕಲಚೇತನ ವಿದ್ಯಾರ್ಥಿಗಳ ನೆರವು, ವಿದ್ಯಾರ್ಥಿನಿಲಯಗಳ ಅಭಿವೃದ್ಧಿಗಳಿಗೆ ವೆಚ್ಚ ಮಾಡುವಂತೆ ಸಲಹೆ ನೀಡದರು. ಮಾನ್ಯ ಕುಲಸಚಿವರು ಮಾತನಾಡಿ, ಈಗಾಗಲೇ ಸ್ನಾತಕೋತ್ತರ ವಿಭಾಗಗಳ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಲಾಗಿದೆ. ಮಾರ್ಚ್-2025ರ ಅಂತ್ಯದೊಳಗಾಗಿ ವಿದ್ಯಾರ್ಥಿಗಳ ವಿವಿಧ ಶೀರ್ಷಿಕೆಗಳಿಗೆ ನೀಡಲಾಗಿರುವ ಅನುದಾನಗಳನ್ನು ವೆಚ್ಚ ಮಾಡಲಾಗುವುದು ಎಂದು ಸಭೆಯ ಗಮನಕ್ಕೆ ತಂದರು.<br><br>ಭದ್ರತಾ ಸಿಬ್ಬಂದಿ ಮತ್ತು ಸರ್ವಿಸಸ್ ವೆಚ್ಚಗಳಿಗೆ 2023-24ನೇ ಸಾಲಿನಲ್ಲಿ ರೂ.962.75 ಲಕ್ಷಗಳನ್ನು ಪಾವತಿಸಲಾಗಿದೆ. ಆದ್ಯಾಗೂ 03 ತಿಂಗಳ ಹುಂಡಿ ಪಾವತಿ ಬಾಕಿಯಿರುವುದನ್ನು ಸಭೆಯು ಗಮನಿಸಿತು.<br><br>ಜಂಟಿ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ ಇವರು ಮಾತನಾಡಿ ಈ ಹಿಂದಿನ ಸಭೆಗಳಲ್ಲಿ ಹೊರಗುತ್ತಿಗೆ ನೌಕರರನ್ನು ಕಡತಗೊಳಿಸುವಂತೆ ಸಲಹೆ ನೀಡಲಾಗಿದೆ. ಅದ್ಯಾಗೂ ಯಾವುದೇ ಕ್ರಮಕೈಗೊಂಡಿರುವುದಿಲ್ಲ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.<br><br>ಶ್ರೀ ಡಿ.ಎಸ್. ಅರುಣ್, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಇವರು ಮಾತನಾಡಿ 412 ಸಂಖ್ಯೆಯ ಅವಶ್ಯಕವಾಗಿದೆಯೇ ಎಂಬ ಬಗ್ಗೆ ಸ್ಪಷ್ಟನೆಯನ್ನು ಕೋರಿದರು.<br><br>ಈ ಬಗ್ಗೆ ಮಾನ್ಯ ಕುಲಸಚಿವರು ಮಾತನಾಡಿ ಈಗಾಗಲೇ ವಿಶ್ವವಿದ್ಯಾಲಯ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಒಂದು ಸಮಿತಿಯನ್ನು ರಚಿಸಿ ವಿಶ್ವವಿದ್ಯಾಲಯದ ಸಂಪನ್ಮೂಲವನ್ನು ಮತ್ತು ಅವಶ್ಯತೆಯನ್ನು ಪರಿಶೀಲಿಸಿ ನೇಮಕಮಾಡಿಕೊಳ್ಳಬೇಕಾದ ಹೊರಗುತ್ತಿಗೆ ನೌಕರರ ಸಂಖ್ಯೆ ಕುರಿತು ವರದಿಯನ್ನು ಪಡೆಯಲಾಗುತ್ತಿದೆ. ಸದರಿ ವರದಿಗೆ ಅನುಸಾರವಾಗಿ ಕಡತಗೊಳಿಸಿ ಹೊಸ ಟೆಂಡರ್ ಕರೆಯಲಾಗುವುದೆಂದು ಸಭೆಯ ಗಮನಕ್ಕೆ ತಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ವರ್ಷದಿಂದ ವರ್ಷಕ್ಕೆ ನಿವೃತ್ತ ನೌಕರರ ಸಂಖ್ಯೆ ಹೆಚ್ಚಳವಾಗುತ್ತಿದೆ. ಹೊಸ ಅಧ್ಯಯನ ವಿಭಾಗಗಳು ಪ್ರಾರಂಭವಾಗಿರುವುದರಿಂದ ಅವುಗಳಿಗೆ ಮಂಜೂರಾದ ಹುದ್ದೆಗಳು ಇಲ್ಲದೇ ಇರುವುದು ಹಾಗೂ ದೂರ ಶಿಕ್ಷಣ ಕೋರ್ಸಗಳಿಗೆ ಪ್ರವೇಶ ಸ್ಥಗಿತಗೊಂಡಿರುವುದನ್ನು ಸಭೆಯ ಅವಗಾಹನೆಗೆ ತಂದರು. |

| | |
|---|---|
| ನಿರ್ಣಯ: | 2023-24ನೇ ಸಾಲಿನ ಆರ್ಥಿಕ ವರ್ಷದ ವರ್ಷದ ಸ್ವೀಕೃತಿ ಮತ್ತು ವೆಚ್ಚಗಳನ್ನು ಹಣಕಾಸು ಅಧಿಕಾರಿಗಳು ಸಭೆಯ ಅನುಮೋದನೆಗಾಗಿ ಮಂಡಿಸಿದರು. ನಂತರ ಸಭೆಯು ಕೂಲಂಕುಷವಾಗಿ ಪರಿಶೀಲಿಸಿ ಅನುಮೋದಿಸಲಾಯಿತು. |
| 2024-ಹಸ:1:04 | **2023-24ನೇ ಅರ್ಥಿಕ ವರ್ಷದ ವಾರ್ಷಿಕ ಲೆಕ್ಕಪತ್ರಗಳ ಅವಲೋಕನ ಹಾಗೂ ಅನುಮೋದನೆ ಕುರಿತು.** |
| **ಚರ್ಚೆ:** | ವ್ಯವಹಾರ ಇಲ್ಲದೆಯಿರುವ ಖಾತೆಗಳನ್ನು ಮುಕ್ತಾಯಗೊಳಿಸುವಂತೆ ಸಭೆಯು ತಿಳಿಸಿತು. ಮಾನ್ಯ ಹಣಕಾಸು ಅಧಿಕಾರಿಗಳು ಮಾತನಾಡಿ, ಪಿಂಚಣಿಯನ್ನು ಪಾವತಿಸಲು 2024-25ನೇ ಸಾಲಿಗೆ ಅನುದಾನ ಕೊರತೆಯಾಗಿರುತ್ತದೆ ಎಂಬ ಅಂಶವನ್ನು ಸರ್ಕಾರದ ಪ್ರತಿನಿಧಿಗಳ ಗಮನಕ್ಕೆ ತಂದರು. ಸರ್ಕಾರದ ಆರ್ಥಿಕ ಇಲಾಖೆಯ ಜಂಟಿ ಕಾರ್ಯದರ್ಶಿಗಳು ಮಾತನಾಡಿ, ಈಗಾಗಲೇ ವಿಶ್ವವಿದ್ಯಾಲಯಕ್ಕೆ ಪತ್ರ ಬರೆಯಲಾಗಿದೆ. ಅತಿಥಿ ಉಪನ್ಯಾಸಕರು ಹಾಗೂ ಹೊರಗುತ್ತಿಗೆ ನೌಕರರ ಸಂಖ್ಯೆಗಳನ್ನು ಕಡಿತಗೊಳಿಸಿ ಪಿಂಚಣಿ ವೇತನಕ್ಕೆ ಸಂಬಂಧಿಸಿದಂತೆ ಮರು ಪ್ರಸ್ತಾವನೆಯನ್ನು ಹಾಗೂ 7ನೇ ಪರಿಷ್ಕೃತ ವೇತನಕ್ಕೆ ಸಹ ಅನುದಾನವನ್ನು ಕೋರುವಂತೆ ತಿಳಿಸಿದರು.<br><br>ಶ್ರೀ. ಡಿ.ಎಸ್. ಅರುಣ್, ಮಾನ್ಯ ವಿಧಾನಪರಿಷತ್ತಿನ ಸದಸ್ಯರು ಇವರು ಮಾತನಾಡಿ, ಅರಣ್ಯ ಗುತ್ತಿಗೆ ಸಂಬಂಧಿಸಿದಂತೆ ಯಾವ ಹಂತದಲ್ಲಿದೆ ಎಂದು ಮಾಹಿತಿಯನ್ನು ಕೋರಿದರು. ಮಾನ್ಯ ಕುಲಸಚಿವರು ಮಾತನಾಡಿ, ಈಗಾಗಲೇ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಕಡತ ರವಾನೆಯಾಗಿದ್ದು ಶೀಘ್ರವಾಗಿ ಗುತ್ತಿಗೆ ಹಣವನ್ನು ಪಾವತಿಸಿ ಗುತ್ತಿಗೆಯನ್ನು ನವೀಕರಿಸಲಾಗುವುದೆಂದು ಸಭೆಯ ಗಮನಕ್ಕೆ ತಂದರು.<br><br>ಜಂಟಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಇವರು 2023-24ರ ಅಂತಿಮ ಶಿಲ್ಕು ಆರಂಭಿಕ ಶಿಲ್ಕುಗಿಂತ ಕಡಿಮೆಯಾಗಿರುವ ಕುರಿತು ಸಭೆಯ ಗಮನಕ್ಕೆ ತಂದರು. ಹಣಕಾಸು ಅಧಿಕಾರಿಗಳು ಈ ಕುರಿತು ಮಾತನಾಡಿ, ದೂರಶಿಕ್ಷಣದಿಂದ ಬರುವ ವರಮಾನ ತುಂಬಾ ಕಡಿಮೆಯಾಗಿರುತ್ತದೆ. ಅಲ್ಲದೆ ಪಿಂಚಣಿ/ಎನ್.ಪಿ.ಎಸ್. ಪಾವತಿಸಲು ಅನುದಾನದ ಕೊರತೆ ಮಧ್ಯಂತರ ಪರಿಹಾರವನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಭರಿಸಿರುವುದರಿಂದ ಅಂತಿಮ ಶಿಲ್ಕು ಗಣನೀಯವಾಗಿ ಕಡಿಮೆಯಾಗಿದೆ ಎಂದು ಸಭೆಗೆ ತಿಳಿಸಿದರು.<br><br>ಶ್ರೀ ಡಿ.ಎಸ್. ಅರುಣ್, ಮಾನ್ಯ ವಿಧಾನಪರಿಷತ್ತಿನ ಸದಸ್ಯರು ಇವರು ಮಾತನಾಡಿ, ಕೇಂದ್ರ ಸರ್ಕಾರವು ವಿವಿಧ ಯೋಜನೆಯಡಿಯಲ್ಲಿ ಅನುದಾನ ಬಿಡುಗಡೆಗೊಳಿಸುತ್ತಾರೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯ ಸಂಶೋಧನೆ ಮತ್ತು ಅಭಿವೃದ್ಧಿ ಮತ್ತು ಮುಂದುವರೆದ ಯೋಜನೆಗಳಿಗೆ ಪ್ರಸ್ತಾವನೆಯನ್ನು ತಯಾರಿಸಿ ಸಲ್ಲಿಸುವಂತೆ ಸಲಹೆ ನೀಡಿದರು.<br><br>ಮಾನ್ಯ ಕುಲಸಚಿವರು ಮಾತನಾಡಿ 12ನೇ ಯೋಜನೆಯ ನಂತರ ವಿಶ್ವವಿದ್ಯಾಲಯಗಳಿಗೆ ಜಿ. ಡಿ.ಎ ಅನುದಾನವು ಬಿಡುಗಡೆಯಾಗಿರುವುದಿಲ್ಲ ಆದ್ದರಿಂದ ವಿಶ್ವವಿದ್ಯಾಲಯಕ್ಕೆ ವಿವಿಧ ಯೋಜನೆಯಡಿಯಲ್ಲಿ ಪ್ರಸ್ತಾವನೆ ತಯಾರಿಸಲಾಗಿದೆ. ಮುಂಗಡ ಪ್ರತಿಯನ್ನು ತಮಗೆ ಕಳುಹಿಸಿಕೊಡಲಾಗುವುದು ಹಾಗೂ ಮಾನ್ಯ ಕುಲಪತಿಗಳ ಜೊತೆಯಲ್ಲಿ ಶೀಘ್ರವಾಗಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮಕೈಗೊಳ್ಳಲಾಗುವುದೆಂದು ಸಭೆಯ ಗಮನಕ್ಕೆ ತಂದರು. |

| | |
|---|---|
| ನಿರ್ಣಯ: | 2023-24ನೇ ಅರ್ಥಿಕ ವರ್ಷದ ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಿ ಸುಧೀರ್ಘವಾಗಿ ಚರ್ಚಿಸಿದ ನಂತರ ಅನುಮೋದಿಸಿತು. |
| 2024-ಹಸ:1:05 | 2024-25ನೇ ಆರ್ಥಿಕ ವರ್ಷದ ಏಪ್ರಿಲ್-2024 ರಿಂದ ಜೂನ್-2024ರವರೆಗಿನ ಸ್ವೀಕೃತಿ ಮತ್ತು ವೆಚ್ಚಗಳ ಅವಗಾಹನೆಗಾಗಿ. |
| ನಿರ್ಣಯ: | 2024-25ನೇ ಆರ್ಥಿಕ ವರ್ಷದ ಏಪ್ರಿಲ್-2024 ರಿಂದ ಜೂನ್ -2024 ರವರೆಗಿನ ಸ್ವೀಕೃತಿ ಮತ್ತು ವೆಚ್ಚಗಳನ್ನು ಹಣಕಾಸು ಅಧಿಕಾರಿಗಳು ಸಭೆಯ ಅವಗಾಹನೆಗೆ ತಂದರು. ಏಪ್ರಿಲ್-2024 ರಿಂದ ಜೂನ್ -2024 ರವರೆಗಿನ ಸ್ವೀಕೃತಿ ರೂ.7018.15 ಲಕ್ಷ ಹಾಗೂ ವೆಚ್ಚ ರೂ.3931.29 ಲಕ್ಷಗಳನ್ನು ಸಭೆಯು ಅವಲೋಕಿಸಲಾಯಿತು. |
| 2024-ಹಸ:1:06 | ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳ ಕಛೇರಿ ಉಪಯೋಗಕ್ಕಾಗಿ Innova Crysta ಹೊಸ ವಾಹನವನ್ನು ಖರೀದಿಸುವ ಬಗ್ಗೆ. |
| ನಿರ್ಣಯ: | ಮಾನ್ಯ ಕುಲಪತಿಗಳಿಗೆ ಕಛೇರಿ ಉಪಯೋಗಕ್ಕಾಗಿ Innova Crysta ಹೊಸ ವಾಹನವನ್ನು ಖರೀದಿಸಲು ಮಾನ್ಯ ಕುಲಸಚಿವರು ಸಭೆಯ ಅನುಮತಿ ಕೋರಿದರು. ಚರ್ಚೆಯ ನಂತರ ಮಾನ್ಯ ಕುಲಪತಿಗಳ ಉಪಯೋಗಕ್ಕಾಗಿ INNOVA CRYSTA ZX Super White ವಾಹನವನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಲ್ಲಿ ರೂ.34.00 ಲಕ್ಷಗಳಿಗೆ ಖರೀದಿಸಲು ಸರ್ಕಾರದ ಅನುಮೋದನೆಯನ್ನು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಲು ಅನುಮೋದಿಸಿತು.<br><br>ಕುಲಸಚಿವರ ವಾಹನವು ಪದೆ ಪದೇ ದುರಸ್ತಿಗೆ ಬರುತ್ತಿದ್ದು ನಿರ್ವಹಣಾ ವೆಚ್ಚವು ಅಧಿಕವಾಗಿರುವುದರಿಂದ ಈ ಹಿಂದೆ ಒಂದು ವಾಹನವನ್ನು ಖರೀದಿಸಲು ಸರ್ಕಾರದ ಆದೇಶ ಸಂಖ್ಯೆ: ಇಡಿ 13 ಯುಎಸ್‌ವಿ 2020 ಬೆಂಗಳೂರು, ದಿನಾಂಕ:24-06-2022ರನ್ವಯ ರೂ.6.50 ಲಕ್ಷಗಳಿಗೆ ಘನ ಸರ್ಕಾರ ಅನುಮೋದನೆಯನ್ನು ನೀಡಲಾಗಿದ್ದು, ಖರೀದಿ ಮಾಡಿರುವುದಿಲ್ಲ. ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ: 14 ಶಿವಾನೀ: 2020 ಬೆಂಗಳೂರು ದಿನಾಂಕ:18-08-2022ರ ಪರಿಷ್ಕೃತ ದರಗಳಲ್ಲಿ ಪುನ: ಸರ್ಕಾರದ ಅನುಮೋದನೆಯನ್ನು ಪಡೆದು ಖರೀದಿಸುವಂತೆ ಸಲಹೆ ನೀಡಿದರು. |
| 2024-ಹಸ:1:07 | ಪರಿನಿಯಮಗಳ ಸ್ಥಾಯಿ ಸಮಿತಿಯಿಂದ ಸಿದ್ಧಪಡಿಸಲಾಗಿರುವ ಪರಿನಿಯಮಗಳನ್ನು ಹಣಕಾಸು ಸಮಿತಿ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ. |
| ಚರ್ಚೆ | ಸಭೆಗೆ ಮಂಡಿಸಲಾದ ಒಟ್ಟು 20 ಪರಿನಿಯಮಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಸರ್ಕಾರ ಪ್ರತಿನಿಧಿಗಳು ಆಕ್ಷೇಪಣೆ ವ್ಯಕ್ತಪಡಿಸಿ ಈಗಾಗಲೇ ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಆಡಳಿತ ವಿಭಾಗದ ಕೆಲವು ಶಾಖೆಗಳು ಬಹಳ ಹಿಂದೆ ಆರಂಭವಾಗಿದ್ದು ಇದೀಗ ತಡವಾಗಿ ಪರಿನಿಯಮವನ್ನು ರಚಿಸಿರುವುದು ಕ್ರಮಬದ್ಧವಾಗಿರುವುದಿಲ್ಲ ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ:183:ಯುಡಿ.ವಿ 2023-24 ದಿನಾಂಕ:13-08-2024ರಂದು ಹೊರಡಿಸಲಾಗಿರುವ ಸುತ್ತೋಲೆಯಲ್ಲಿರುವ ಅಂಶಗಳನ್ನು ಸಭೆಯ ಗಮನಕ್ಕೆ ತಂದರು. |

| Particulars | Cash (Rs. lakhs) | TDR |
|---|---|---|
| Opening Balance | 4525.64 | 6297.79 |
| Total Receipts | 18153.85 | 8346.28 |
| Total Expenditure | 15903.58 | 427.35 |
| Closing Balance | 2250.27 | 7918.94 |

| | |
|---|---|
| | ಈ ವಿಷಯ ಕುರಿತು ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರು ಮಾತನಾಡಿ, ಸದರಿ ಪರಿನಿಯಮಗಳನ್ನು ಹಿಂದೆಯೆ ಸಲ್ಲಿಸಿದ್ದು, ಸರ್ಕಾರದ ಹಂತದಲ್ಲಿ ನ್ಯೂನತೆಗಳನ್ನು ಮತ್ತು ಅಕ್ಷೇಪಣೆಗಳನ್ನು ಸರಿಪಡಿಸಿ ಮರು ಸಲ್ಲಿಸಲು ಪರಿನಿಯಮಗಳನ್ನು ಹಿಂದುರುಗಿಸಲಾಗಿದೆ. ಇವುಗಳನ್ನು ಪರಿಶೀಲಿಸಿ ಎಲ್ಲಾ ಪರಿನಿಯಮಗಳಲ್ಲಿನ ತಾಂತ್ರಿಕ ದೋಷಗಳು, ಮುದ್ರಣ ದೋಷಗಳು ಮತ್ತು ಅಸಂಗತ ದೋಷಗಳನ್ನು ಸರಿಪಡಿಸಿ ಉಪಬಂಧ ೦೮ರಲ್ಲಿನ Repeal and Savingsನ್ನು ಕ್ರಮಬದ್ಧಗೊಳಿಸಿ ಪರಿನಿಯಮಗಳನ್ನು ಸರ್ಕಾರಕ್ಕೆ ಆರ್ಥಿಕ ಹೊರೆಯಾಗದಂತೆ ಪರಿಷ್ಕರಿಸಿ ಅನುಮೋದನೆಗಾಗಿ ಮರು ಸಲ್ಲಿಸಲಾಗಿದೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದಿರುತ್ತಾರೆ. |
| ನಿರ್ಣಯ: | ಚರ್ಚೆಯ ನಂತರ ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರು ನೀಡಿರುವ ವಿವರಣೆಯನ್ನು ಸಭೆಯು ಅಂಗೀಕರಿಸಿ ಸರ್ಕಾರಕ್ಕೆ ಯಾವುದೇ ರೀತಿಯ ಆರ್ಥಿಕ ಹೊರೆಯಾಗದಂತೆ ಈ ಕೆಳಕಂಡ ಪರಿನಿಯಮಗಳನ್ನು ಅನುಮೋದಿಸಿತು.<br><br>ಸರ್ಕಾರಕ್ಕೆ ಶೀಘ್ರವಾಗಿ ಸಲ್ಲಿಸಿ ಪರಿನಿಯಮಗಳ ಸಂಬಂಧ ಘನತೆವೆತ್ತ ಕುಲಾಧಿಪತಿಗಳ ಅನುಮೋದನೆಯನ್ನು ಪಡೆದುಕೊಳ್ಳಲು ನಿರ್ಣಯಿಸಲಾಯಿತು. ಮುಂದುವರೆದಂತೆ ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ:183:ಯುಡಿ.ವಿ2023-24 ದಿನಾಂಕ:13-08-2024ರಂದು ಕಡ್ಡಾಯವಾಗಿ ಪಾಲಿಸುವಂತೆ ಸಲಹೆ ನೀಡಲಾಯಿತು. |
| | 1) Statutes governing the establishment of Department of Post Graduate Studies and Research in Biochemistry at the University headquarter, Jnanasahyadri, Shankaraghatta and institution of Teaching and Non-Teaching Posts in the Department. |
| | 2) Statutes governing the establishment of the Post graduate Department of Studies and Research in Bioinformatics at the University headquarter Jnanasahyadri, Shankaraghatta and institution of teaching and non-teaching posts in the Department. |
| | 3) Statutes governing the establishment of the Post graduate Department of Studies and Research in Biotechnology at Kuvempu University, Sahyadri College Campus, Shivamogga, and institution of Teaching and Non-teaching posts in the Department. |
| | 4) Statutes governing the establishment of the Post graduate Department of Studies and Research in Business Administration at the University headquarter, Jnansahyadri, Shankaraghatta and institution of Teaching and Non teaching posts in the Department. |
| | 5) Statutes governing the establishment of the Post graduate department of studies and research in chemistry at Kuvempu University Post graduate Centre, Kadur and institution of Teaching and Non- teaching posts in the Department. |

| | |
|---|---|
| | 6) Statutes governing the establishment of Department of Post graduate Studies and Research in Commerce, at Kuvempu University Post graduate Centre, Kadur, and institution of teaching and non-teaching posts in the Department. |
| | 7) Statutes governing the establishment of the Department of Post graduate Studies and Research in Computer Science, at the University headquarter, Jnanasahyadri, Shankaraghatta and institution of teaching and non-teaching posts in the Department. |
| | 8) Statutes governing the establishment of Department of Post graduate Studies and Research in Tourism Administration, at the University headquarter, Jnanasahyadri, Shankaraghatta and institution of teaching and non-teaching posts in the department. |
| | 9) Statutes governing the establishment of the Post graduate Department of Studies and Research in Physical Education at the University headquarter, Jnanasahyadri, Shankaraghatta and institution of teaching and non teaching posts in the Department. |
| | 10) Statutes governing the establishment of the Post graduate Department of Studies and Research in Journalism and Mass Communication at the university headquarter, Jnanasahyadri, Shankaraghatta and institution of teaching and non-teaching posts in the department. |
| | 11) Statutes governing the establishment of the Post graduate Department of Studies and Research in Commerce at the University headquarter, Jnanasahyadri, Shankaraghatta and institution of teaching and non-teaching posts in the Department. |
| | 12) Statutes governing the establishment of the Post graduate Department of Studies and Research in Master of Business Administration in Human Resource Management at the University headquarter, Jnanasahyadri, Shankaraghatta and institution of teaching and non-teaching posts in the Department. |
| | 13) Statutes governing the establishment of the Post graduate Department of Studies and Research in Microbiology at the University headquarter, Jnanasahyadri, Shankaraghatta and institution of teaching and non-teaching posts in the Department. |
| | 14) Statutes governing the establishment of the Post graduate Department of Studies and Research in Pharmaceutical Chemistry at the Kuvempu University post graduate centre, Kadur and institution of teaching and non-teaching posts in the department. |

| | |
|---|---|
| | 15) Statutes governing the establishment of Prasaranga in Kuvempu University and institution of posts in Prasaranga. |
| | 16) Statutes governing the establishment of Post graduate Programme in Remote Sensing Applications in the Post graduate Department of Applied Geology at the University headquarter, Jnanasahyadri, Shankaraghatta and institution of teaching and non-teaching posts in the Department |
| | 17) Statutes governing the institution of Research fellowships to SC/ST Research fellows in P.G. Departments of Kuvempu University |
| | 18) Statutes governing the establishment of the Post graduate Department of Studies and Research in Social Work at the Kuvempu University headquater, Jnanasahyadri, Shankaraghatta and institution of teaching and non-teaching posts at the Department. |
| | 19) The Kuvempu University Statute governing the establishment of Centre for Online Education (CoE) under the Directorate of Distance Education. |
| | 20) Statutes governing the establishment of the Post- graduate Department of Studies and Research in Wildlife and Management at the University headquarter, Jnanasahyadri, Shankaraghatta and institution of teaching and non-teaching posts in the Department. |
| 2024-ಹಸ:1:08 | ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು.<br>-ಯಾವುದು ಇರುವುದಿಲ್ಲ - |
| | ಅಂತಿಮವಾಗಿ, ಸಭೆಗೆ ಆಗಮಿಸಿ ತಮ್ಮ ಅತ್ಯಮೂಲ್ಯ ಸಲಹೆ/ ಸಹಕಾರಗಳನ್ನು ನೀಡಿದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ಮಾನ್ಯ ಕುಲಸಚಿವರು ವಂದಿಸಿದ ನಂತರ ಸಭೆಯು ಮುಕ್ತಾಯಗೊಂಡಿತು. |
| | (ಪ್ರೊ. ಹೆಚ್. ಎನ್.ರಮೇಶ)<br>ಹಣಕಾಸು ಅಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿಗಳು<br><br>ಸಹಿ/-<br>(ಪ್ರೊ. ಶರತ್ ಅನಂತಮೂರ್ತಿ)<br>ಕುಲಪತಿಗಳು ಹಾಗೂ ಅಧ್ಯಕ್ಷರು |